# ಕನ್ನಡ ಕಲಿಯಿರಿ

ಕನ್ನಡ ನಾಡಿನ ಚಿಣ್ಣರೆ ಕೇಳಿರಿ
ಕನ್ನಡ ಭಾಷೆಯ ಕಲಿಯಿರಿ
ಚಿನ್ನದಂಥ ನುಡಿಯನು ಕಲಿತು
ಉನ್ನತಿ ಹೊಂದಿ ನಲಿಯಿರಿ

ಕನ್ನಡಕೆ ಸಿಕ್ಕಿದೆ ಈಗ
ಶಾಸ್ತ್ರೀಯ ಭಾಷೆಯ ಸ್ಥಾನ
ಮೂಡಲಿ ನಿಮ್ಮಲಿ
ಭಾಷೆಯ ಬಗ್ಗೆ ಅಭಿಮಾನ

ಮುತ್ತು ಪೋಣಿಸಿದಂತೆ ಕನ್ನಡದ
ಅಕ್ಕರೆಯ ಅಕ್ಷರ ಮಾಲೆ
ಕನ್ನಡ ಕಲಿತರೆ ಮುಂದಿನ ಬಾಳು
ಉತ್ಸಾಹದ ಉಯ್ಯಾಲೆ

ಸುಲಿದ ಬಾಳೆಯ ಹಣ್ಣಿನಂತೆ ಸುಲಭ
ಕನ್ನಡವೇ ಅಮರ ಆಸ್ತಿ
ಈ ಭಾಷೆಯ ಕೃತಿಗಳಿಗೆ ದೊರೆತಿವೆ
ಎಂಟು ಜ್ಞಾನ ಪೀಠ ಪ್ರಶಸ್ತಿ

ಜ್ಞಾನ ಉಣಿಸುವ ಮನ ತಣಿಸುವ
ಈ ಕನ್ನಡ ನುಡಿ
ಆರು ಕೋಟಿ ಕನ್ನಡಿಗರ ಬಾಳಿನ
ಭಾಗ್ಯದ ರನ್ನಗನ್ನಡಿ

ಬಸವಾದಿ ಶರಣರ ವಚನದ ಸಾರ
ಜ್ಞಾನ, ಭಕ್ತಿಯ ರಸಪಾನ
ದಾಸವರೇಣ್ಯರ ಹಾಡುಗಳ ಸಂದೇಶ
ಮುಕ್ತಿಗೆ ಸೋಪಾನ

ಕೇಂದ್ರ ಸರಕಾರದಿಂದ ದೊರಕಲಿದೆ
ಕನ್ನಡಕೆ ಹೆಚ್ಚಿನ ಅನುದಾನ
ಮಾತೃಭಾಷೆ ಬೆಳೆದು ಬೆಳಗಲು
ಇದುವೆ ಒಂದು ವರದಾನ

ಮುದ್ದು ಮಕ್ಕಳೇ ಬುದ್ಧಿವಂತರಾಗಲು ನೀವು
ಶ್ರದ್ಧೆಯಿಂದ ಕಲಿಯಿರಿ ಈ ಭಾಷೆ
ಶುದ್ಧ ಜ್ಞಾನ ವೃದ್ಧಿಗೊಂಡು ಈಡೇರುವುದು ನಿಮ್ಮೆಲ್ಲರ ಆಸೆ

**-ಬಸವರಾಜ ಹೂಗಾರ, ಹುನಗುಂದ**



ಚಿತ್ರಗಳು: ಗಣೇಶ್ ಅರಳಿಕಟ್ಟಿ




ಕಡಲ ನೀರು ಆವಿ ಆತು
ಸುಡುವ ಬಿಸಿಲಿಗೆ
ಓಡಿ ಓಡಿ ಮೋಡ ಬಂತು
ನೋಡು ಬಾನಿಗೆ

ಗಾಳಿ ಬೀಸಿ ಸುತ್ತಿ ಸುಳಿದು
ಧೂಳು ಏಳಲು
ಕಾಡು ಮೇಡು ಮೋಡ ತಡೆದು
ಮುತ್ತನೀಯಲು

ಕಪ್ಪು ಮೋಡ ಸೊಕ್ಕಿನಿಂದ
ಡಿಕ್ಕಿ ಹೊಡೆಯಲು
ಗುಡುಗು ಮಿಂಚು ಸಿಡಿಲ ಸದ್ದು
ಬೆಚ್ಚಿ ಬೀಳಲು

ಮೋಡದಿಂದ ಮಳೆಯು ಬಂತು
ಹಸಿದ ಭೂಮಿಗೆ
ಮಳೆಯು ಬರಲು ಹಚ್ಚ ಹಸಿರು
ಖುಷಿಯು ಕಣ್ಣಿಗೆ

ಮಳೆಯು ಸುರಿವ ಸೊಬಗನೊಮ್ಮೆ
ನೋಡ ಬನ್ನಿರಿ
ಗೆಳೆಯರೆಲ್ಲ ಕೂಡಿ ಮಳೆಯ
ಆಟ ಆಡಿರಿ

**- ಡಾ.ಕರವೀರಪ್ರಭು ಕ್ಯಾಲಕೊಂಡ**

## ನಿಮಗೆಷ್ಟು ಗೊತ್ತು — ಜೀವಿಗಳ ಗುಣಧರ್ಮ

| | |
|---|---|
| ಕುದುರೆ | ವೇಗ |
| ಪಾರಿವಾಳ | ಶಾಂತಿ |
| ಜೇನು | ಉದ್ಯೋಗಶೀಲತೆ |
| ಕೋಳಿ | ಸಮಯ ಪ್ರಜ್ಞೆ |
| ನರಿ | ಕಪಟತನ |
| ಗರುಡ | ಸ್ಫೂರ್ತಿ |
| ಗಿಳಿ | ಮೃದುಮಾತು |
| ಎತ್ತು | ತಾಳ್ಮೆ, ಶಕ್ತಿ |
| ಕಾಗೆ | ಹಂಚಿ ತಿನ್ನುವುದು |
| ನಾಯಿ | ನಂಬಿಕೆ |
| ತೋಳ | ಹೊಟ್ಟೆಬಾಕತನ |
| ಗುಬ್ಬಿ | ಗೂಡು ಕಟ್ಟುವ ಕಲೆ |
| ಕುರಿ | ದಡ್ಡತನ |
| ನವಿಲು | ನಾಟ್ಯ |

(ಸಂಗ್ರಹ) ಜಯಲಕ್ಷ್ಮಿ, ವಿಟ್ಲ